ಸೆಲೆಬ್ರಿಟಿ

■ ಹನಿ

# ಸ್ಟೋನ್ ಸುಂದರಿ!



ಈಕೆಯ ಹೆಸರಲ್ಲೇ ಕಲ್ಲಿದೆ! ಶರೂನ್ ಸ್ಟೋನ್ ಎಂಬ ಹಾಲಿವುಡ್ ಸುಂದರಿ ಅದರ ಮೇಲೆ ಹರಳು ಕಲ್ಲುಗಳ ಆಭರಣಗಳನ್ನೂ ಧರಿಸಿಕೊಂಡರೆ ಇನ್ನೇನು ಹೆಸರಿಡೋಣ?

ಹಲವು ಆಭರಣ ಬ್ರಾಂಡ್‌ಗಳಿಗೆ ಮಾಡೆಲ್ ಆಗಿರುವ ಶರೂನ್ ಸ್ಟೋನ್, ಇದೀಗ ಆಫ್ರಿಕಾದ ಬಡ ಹಳ್ಳಿಗಳತ್ತ ಚಿತ್ತ ಹರಿಸಿದ್ದಾಳೆ. ಆಭರಣ ಕಂಪೆನಿಗಾಗಿ 'ಮಾಜಿ' ಎಂಬ ಹೊಸ ಬ್ರಾಂಡ್ ಪ್ರಚಾರ ನಡೆಸಿರುವ ಶರೂನ್, ಹೀಗೆ ಬಂದ ಆದಾಯದಲ್ಲಿ ಒಂದು ಪಾಲನ್ನು ಆಫ್ರಿಕಾದ ಹಳ್ಳಿಗಳಲ್ಲಿ ಕುಡಿಯುವ ಶುದ್ಧ ನೀರಿಗಾಗಿ ಬಳಸಲಿದ್ದಾಳಂತೆ. ಈಗಾಗಲೆ ಅದಕ್ಕಾಗಿ ಉಗಾಂಡಾಕ್ಕೆ ಭೇಟಿ ನೀಡಿದ್ದಾಳೆ. 'ದಿ ಕ್ಲೀನ್ ವಾಟರ್ ಪ್ರಾಜೆಕ್ಟ್' ಅನ್ನೋದು ಆಕೆಯ ಯೋಜನೆಯ ಹೆಸರು. ಅಂದ ಹಾಗೆ, ಸ್ವಾಹಿಲಿ ಭಾಷೆಯಲ್ಲಿ ಮಾಜಿ ಅಂದರೆ ನೀರು ಎಂದರ್ಥವಂತೆ. 50ರ ಗಡಿ ದಾಟಿ, ಅದಾಗಲೆ ಹಾಲಿವುಡ್‌ನಲ್ಲಿ ಮಾಜಿ ಆಗಿರುವ ಶರೂನ್, ಮಾಜಿಯಿಂದಲೇ ಮ್ಯಾಜಿಕ್ ನಡೆಸ ಹೊರಟಿರುವುದು ನಿಜಕ್ಕೂ ಹೆಮ್ಮೆಯ ವಿಷಯ.

# ಕೋಟಿ ವೀರರ ಕದನ



'ಏಷ್ಯಾದ ಅತಿ ದೊಡ್ಡ ಶ್ರೀಮಂತ ಯಾರು?' ಎನ್ನುವುದೀಗ ತಮಿಳುನಾಡಿನಲ್ಲಿ ಬಿಸಿ ಚರ್ಚೆಯ ವಿಷಯ. ವಿಷಯ ಎತ್ತಿದವರು 'ಮಂಡ್ಯದ ಮಾನಿನಿ' ತಮಿಳುನಾಡಿನ ಮಾಜಿ ಮುಖ್ಯಮಂತ್ರಿ, ಮಾಜಿ ಕೋಟ್ಯಾಧೀಶೆ ಜೆ.ಜಯಲಲಿತಾ. ಅವರ ಪ್ರಕಾರ, 'ಮುಖ್ಯಮಂತ್ರಿ ಕರುಣಾನಿಧಿ ಏಷ್ಯಾದ ಅತಿದೊಡ್ಡ ಶ್ರೀಮಂತ!'

ಡಿಎಂಕೆ ಮತ್ತು ಅಣ್ಣಾಡಿಎಂಕೆ ಕೋಳಿ ಜಗಳ ಇಂದು ನಿನ್ನೆಯದಲ್ಲ. ಈ ಸಲ ಇಬ್ಬರ ಮಧ್ಯೆ ಬೊಕ್ಕಸದ ಹಣ ಲೂಟಿ ಹೊಡೆದದ್ದರ ಬಗ್ಗೆ ಜಗಳ ಶುರುವಾಗಿದೆ. ಜಯಲಲಿತಾ ಹೇಳಿಕೆಗೆ ಪ್ರತಿಯಾಗಿ ಕರುಣಾನಿಧಿ ತಮ್ಮೆಲ್ಲ ಆಸ್ತಿ ವಿವರಗಳನ್ನು ಬಹಿರಂಗವಾಗಿ ಘೋಷಿಸಿದ್ದಾರೆ. 'ನಾನು ಶ್ರೀಮಂತನಲ್ಲ' ಎಂದಿದ್ದಾರೆ. ಅವರ ಮಾತುಗಳಲ್ಲೇ ಕೇಳಿ: 'ನನ್ನ ಆಸ್ತಿ ಎಂದರೆ ಬರೀ 6.01 ಕೋಟಿ ರೂಪಾಯಿ ಹಣ ಮತ್ತು ಹಳೆಯದೊಂದು ಮನೆ. ಹಣದಲ್ಲೂ 5.66 ಕೋಟಿ ಎಫ್‌ಡಿ ಯಲ್ಲಿದೆ; ಉಳಿದದ್ದು ಎಸ್‌ಬಿಯಲ್ಲಿದೆ. ಐದು ವರ್ಷಗಳ ಕೆಳಗೆ ನಮ್ಮ ಕುಟುಂಬ ಒಡೆತನದ ಸನ್ ಟಿ.ವಿ ಯಲ್ಲಿ ನನ್ನ ಪಾಲಿಗಿದ್ದ ಷೇರನ್ನು ಕಳಾನಿಧಿ ಮತ್ತು ದಯಾನಿಧಿ ಮಾರನ್‌ಗೆ ಮಾರಿದೆ. ಅದರಿಂದ ಒಂದು ನೂರು ಕೋಟಿ ರೂಪಾಯಿ ಬಂತು. ಅದರಲ್ಲಿ 22.5 ಕೋಟಿ ಆದಾಯ ತೆರಿಗೆ ಕಟ್ಟಿದೆ. ಉಳಿದ 77.5 ಕೋಟಿ ಹಣವನ್ನು ಮಕ್ಕಳಿಗೆ ಹಂಚಿದೆ. 10 ಕೋಟಿ ರೂಪಾಯಿ ಮಾತ್ರ ನನಗಾಗಿ ಉಳಿಸಿದೆ. ಅದರಲ್ಲಿ 5 ಕೋಟಿಯನ್ನು ಕರುಣಾನಿಧಿ ಟ್ರಸ್ಟ್‌ಗೆ ನೀಡಿದ್ದೇನೆ. ನನ್ನದು ಬೀದಿ ಮನೆಯಲ್ಲಿ ವಾಸ. ಆ ಕಾಲದಲ್ಲಿ ಆ ಮನೆಯನ್ನು 45 ಸಾವಿರ ರೂಪಾಯಿಗೆ ಕೊಂಡದ್ದು. ಈಗ ಅದಕ್ಕೆ ಒಂದಿಷ್ಟು ಕೋಟಿ ಬೆಲೆ ಬಂದಿರಬಹುದು..'

'ಯಾರು ಶ್ರೀಮಂತರು' ಅನ್ನುವುದು ಗೊತ್ತಾಯಿತೆ?

# ಕಿಚನ್ ಕಪೂರ್ ಟಿ.ವಿ

ಹಾಡಿಗೊಂದು ಟಿ.ವಿ, ಕುಣಿತಕ್ಕೊಂದು ಟಿ.ವಿ, ಭಕ್ತಿಗೊಂದು ಟಿ.ವಿ, ಫ್ಯಾಷನ್‌ಗೊಂದು ಟಿ.ವಿ, ಇತಿಹಾಸಕ್ಕೊಂದು ಟಿ.ವಿ, ಸಿನಿಮಾಕ್ಕೊಂದು ಟಿ.ವಿ!– ಹೀಗಿರುವಾಗ ಊಟಕ್ಕೊಂದು ಟಿ.ವಿ ಇಲ್ಲದಿದ್ದರೆ ಹೇಗೆ? ಅದಕ್ಕೆಂದೇ ಅಡುಗೆ ಮನೆಯ ಸೂಪರ್‌ಸ್ಟಾರ್ ಸಂಜೀವ್ ಕಪೂರ್ ತನ್ನದೇ ಆದ ಹೊಸ ಟಿ.ವಿ ಚಾನೆಲ್ ಶುರು ಮಾಡಲಿದ್ದಾನೆ! ಸಂಜೀವ್ ಕಪೂರ್‌ನ ಈ ಹೊಸ 24 ಇನ್‌ಟು 7 ಹಿಂದಿ ಚಾನೆಲ್ 2011ರ ಆರಂಭದಲ್ಲಿ ಚಾಲೂ ಆಗಲಿದೆ.

ಈ ಹೊಸ ಚಾನೆಲ್‌ನ ಹೆಸರು ಫುಡ್‌ಫುಡ್ ಟಿ.ವಿ! ಮಲೇಷ್ಯಾದ ಆಸ್ಟ್ರೊ ಆಲ್ ಏಷ್ಯನ್ ನೆಟ್‌ವರ್ಕ್ ಮತ್ತು ಕಪೂರ್ ಪತ್ನಿ ಅಲ್ಯೋನಾಳ ಜಂಟಿ ಒಡೆತನದ ಟರ್ಮರಿಕ್ ವಿಸನ್ ಪ್ರೈ.ಲಿಮಿಟೆಡ್ ಈ ಕುರಿತು ಒಪ್ಪಂದಕ್ಕೆ ಸಹಿ ಹಾಕಿವೆ. 'ಜಗತ್ತಿನಾದ್ಯಂತ ಆಹಾರಗಳನ್ನು ಪರಿಚಯಿಸುವುದೇ ನಮ್ಮ ಗುರಿ. ಟಿ. ಜತೆಗೆ ಮೊಬೈಲ್ ಮತ್ತು ವೆಬ್‌ನಲ್ಲೂ ಈ ಕಾರ್ಯಕ್ರಮಗಳು ಲಭ್ಯ' ಎಂದು ಕಪೂರ್ ಪ್ರಕಟಿಸಿದ್ದಾನೆ. ಫಿರಂಗಿ ತಡ್ಕ, ಸಿರ್ಫ್ 30 ಮಿನಿಟ್ಸ್ ಮತ್ತು ರೆಡೀ ಸ್ಟಡೀ ಕುಕ್ ಮುಂತಾದ ಕಾರ್ಯಕ್ರಮಗಳು ಈಗಾಗಲೆ ಸಿದ್ಧವಾಗಿವೆಯಂತೆ. ಬಾಯಲ್ಲಿ ನೀರೂರುತ್ತಿದೆಯೆ? ಜನವರಿವರೆಗೆ ತಡೆದುಕೊಳ್ಳಿ!



Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@deccanherald.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65